ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ)

ನಗರ ಸಿವಿಲ್ ನ್ಯಾಯಾಲಯದ ಆವರಣದಲ್ಲಿ

7 ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಧೀಶರ ಹುದ್ದೆಗಳು ಖಾಲಿ ಇವೆ.

5 ಸಣ್ಣ ಪ್ರಕರಣಗಳ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ.

ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು

ಇಲ್ಲ.

ಮೇಯೋಹಾಲ್ ಕೋರ್ಟ್‌ಗಳಲ್ಲಿ

1 ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ಹುದ್ದೆ ಖಾಲಿ ಇದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳ ದಾಸ್ತಾನಾಗಿರುವ ಒಟ್ಟು ಸಕ್ಕರೆ ಕುರಿತು

3180 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಸಕ್ಕರೆ ಕಾರ್ಖಾನೆಗಳಲ್ಲಿ ದಾಸ್ತಾನಾಗಿರುವ ಒಟ್ಟು ಸಕ್ಕರೆ ಪ್ರಮಾಣ ಎಷ್ಟು?

ಆ) ಈ ದಾಸ್ತಾನಿನಿಂದ ರೈತರಿಗೆ ಏನಾದರೂ ತೊಂದರೆ ಆಗಿದೆಯೇ?

ಇ) ವಿವಿಧ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಒದಗಿಸಿರುವ ರೈತರಿಗೆ ಬಾಕಿ ಇರುವ ಹಣ ಎಷ್ಟು?

ಈ) ಈ ಬಾಕಿ ಹಣವನ್ನು ಎಂದು ಪಾವತಿ ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದ ಒಟ್ಟು 33 ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 9.16 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ.

ಆ) ಹೆಚ್ಚಿನ ದಾಸ್ತಾನಿನ ಪ್ರಮಾಣದಂತೆ, ಕಾರ್ಖಾನೆಗಳು, ಹೆಚ್ಚಿನ ಪ್ರಮಾಣದ ಸಾಲ ಪಡೆಯಲು ಸಾಧ್ಯವಾಗದೇ, ಕೆಲವು ಪ್ರಕರಣಗಳಲ್ಲಿ ರೈತರ ಕಬ್ಬಿನ ಬಿಲ್ಲನ್ನು ಪೂರ್ತಿಯಾಗಿ ಪಾವತಿಸಲು ಸಾಧ್ಯವಾಗದೆ ರೈತರಿಗೆ ತೊಂದರೆಯಾಗುತ್ತಿದೆ.

ಇ) 15-8-2000ರಲ್ಲಿದ್ದಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ. 8922.74 ಲಕ್ಷ ಕಬ್ಬು ಬೆಲೆ ಬಾಕಿ ಇದೆ. ಇದರಲ್ಲಿ ಹಾಲಿ ವರ್ಷದ ಬಾಕಿ ರೂ. 6640.13 ಲಕ್ಷ ಹಾಗೂ ಹಿಂದಿನ ವರ್ಷಗಳ ಬಾಕಿ ರೂ. 2281.61 ಲಕ್ಷಗಳಾಗಿವೆ.

ಸಕ್ಕರೆ ಬೆಲೆಯಲ್ಲಿಯ ಕುಸಿತದಿಂದಾಗಿ ಸಕ್ಕರೆ ಮಾರಾಟವಾಗದೇ ರೈತರಿಗೆ ಕೊಡಬೇಕಾದ ಬಾಕಿ ತೀರುವಳಿಯಾಗದೇ ಬಾಕಿ ಉಳಿದಿದ್ದು ಇದೆ. ಇತ್ತೀಚೆಗೆ ಸಕ್ಕರೆ ಬೆಲೆಯಲ್ಲಿ ಚೇತರಿಕೆ ಕಂಡು ಬಂದಿದ್ದರಿಂದ ಸಕ್ಕರೆ ಮಾರಾಟವಾಗಿ ಆದಷ್ಟು ಶೀಘ್ರದಲ್ಲಿ ಬಾಕಿ ತೀರುವಳಿಯಾಗುವ ನಿರೀಕ್ಷೆ ಇದೆ.

ಈ) ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆ ಬಾಕಿ ತೀರುವಳಿ ಮಾಡಲು ತಮ್ಮಲ್ಲಿರುವ ಸಕ್ಕರೆ ಮಾರಾಟ ಮಾಡಬೇಕಾಗಿರುತ್ತದೆ. ಸಕ್ಕರೆ ಬಿಡುಗಡೆಯಾದಂತೆ ಕಬ್ಬಿನ ಬೆಲೆ ತೀರುವಳಿಯ ಪ್ರಕ್ರಿಯೆ ನಿರಂತರವಾಗಿ ನಡೆದಿರುತ್ತದೆ. ಕೆಲವೊಂದು ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಈ ಪ್ರಕ್ರಿಯೆಗೆ ತಡೆಯುಂಟಾಗಿ ಅಲ್ಪ ಕಾಲಾವಧಿಗೆ ಬಾಕಿ ಉಳಿಯುವ ಸಾಧ್ಯತೆ ಇರುತ್ತದೆ. ಹೆಚ್ಚಿನ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳು ಅಲ್ಪ ಕಾಲಾವಧಿಯವರೆಗೆ ಬಾಕಿ ಉಳಿಸಿಕೊಂಡಿರುವುದು ಕಂಡುಬರುತ್ತದೆ. ಕೆಲವೊಂದು ಕಾರ್ಖಾನೆಗಳಲ್ಲಿ ಹೆಚ್ಚಿನ ಅವಧಿಗೆ ಬಾಕಿ ಇರುವುದು ಕರಾಡ ಕಂಡು ಬರುತ್ತಿದೆ. ಸಕ್ಕರೆ ಮಾರಾಟವಾದಂತೆ ಈ ಬಾಕಿ ತೀರುವಳಿಯಾಗುತ್ತಿರುತ್ತದೆ. ಹಾಗೂ ಹೊಸದಾಗಿ ಕಬ್ಬು ಸರಬರಾಜು ಮಾಡಿದಂತೆಲ್ಲಾ ಬಾಕಿ ಪುನಃ ಸೇರಿಕೊಳ್ಳುತ್ತಿರುತ್ತದೆ. ಈ ಪ್ರಕ್ರಿಯೆ ಹೊರತುಪಡಿಸಿ ಇನ್ನಾವುದೇ ಕಾರಣಕ್ಕೆ ಕಬ್ಬಿನ ಬೆಲೆ ಬಾಕಿ ಉಳಿದುಕೊಂಡಿದ್ದರೆ ಅಂತಹ ಕಾರ್ಖಾನೆಗಳನ್ನು ಗುರುತಿಸಿ, ಕೂಡಲೇ ಬಾಕಿ ತೀರುವಳಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಹಣ ಬಿಡುಗಡೆ

3181 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999-2000 ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವೆಷ್ಟು?*

ಆ) *ಇದರಲ್ಲಿ ಬಿಡುಗಡೆ ಆಗಿರುವ ಹಣ ಎಷ್ಟು?*

ಇ) *2000-2001ನೇ ಸಾಲಿನಲ್ಲಿ ಈ ಎರಡೂ ಮಂಡಳಿಗಳಿಗೆ ಬಿಡುಗಡೆ ಆಗಿರುವ ಹಣ ಎಷ್ಟು?*

ಈ) *ಇದರಲ್ಲಿ ಎಷ್ಟು ಹಣ ಖರ್ಚಾಗಿರುತ್ತದೆ? (ವಿವರಗಳನ್ನು ಕೊಡುವುದು)*